# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ

ಸಂಪುಟ : 46 | ಸಂಚಿಕೆ : 17 | ಪುಷ್ಯ–ಮಾಘ | ಕಲಿಯುಗಾಬ್ದ 5126 | 01–01–2025 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4




**ಕಾಸರಗೋಡು:** ಶ್ರೀಮದ್ ಜಗದ್ಗುರು ಶಂಕರಾಚಾರ್ಯ ಸಂಸ್ಥಾನ ಎಡನೀರು ಮಠದ ಪೂಜ್ಯ ಶಂಕರಾಚಾರ್ಯ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳು ಕಾಸರಗೋಡಿನ ಧರ್ಮಜಾಗರಣ ಗತಿವಿಧಿಯ ವತಿಯಿಂದ ಆಯೋಜಿಸಲಾದ 'ಸಾಮರಸ್ಯದ ನಡಿಗೆ' ಕಾರ್ಯಕ್ರಮದ ಭಾಗವಾಗಿ ಪಾದಯಾತ್ರೆಯ ಮೂಲಕ ಎಣ್ಮಕಜೆ ಪಂಚಾಯತ್‌ನ ವಾಣೀನಗರ ಕುತ್ತಾಜೆಯ ದಲಿತ ಕಾಲನಿಯ 28 ಮನೆಗಳನ್ನು ಸಂದರ್ಶಿಸಿ ಮನೆಮಂದಿಗೆ ಅನುಗ್ರಹ ಮಂತ್ರಾಕ್ಷತೆ ನೀಡಿ ಹರಸಿದರು.

# ಏಕ ರಾಷ್ಟ್ರ, ಏಕ ಚುನಾವಣೆ ಆವಶ್ಯಕತೆ ಮತ್ತು ಸವಾಲುಗಳು

■ **ಅಜಿತ್ ಶೆಟ್ಟಿ ಹೆರಂಜೆ**



ಚುನಾವಣೆಯನ್ನು ಪ್ರಜಾಪ್ರಭುತ್ವದ ಉತ್ಸವ ಎನ್ನುತ್ತಾರೆ, ಆದರೆ ಮುಂದೊಂದು ದಿನ ಇದೇ ಉತ್ಸವ ಪ್ರಜಾಪ್ರಭುತ್ವವೆಂಬ ತೇರನ್ನು ಎಳೆಯಲಾಗದಷ್ಟು ಭಾರವಾದಾಗ ಏನು ಮಾಡಬೇಕು? ಸಹಜವಾಗಿಯೇ ಭಾರವನ್ನು ಕಡಿಮೆಗೊಳಿಸಬೇಕು ಅಲ್ಲವೇ. ಆ ಭಾರವನ್ನು ಇಳಿಸುವ ಸಲುವಾಗಿಯೇ 'ಒಂದು ದೇಶ ಒಂದು ಚುನಾವಣೆ'ಯ ನೀತಿಯನ್ನು ಜಾರಿಗೆ ತರಲು ಈಗ ಕೇಂದ್ರದ ಮೋದಿ ಸರಕಾರ ಹೊರಟಿದೆ. ವರ್ತಮಾನದ ಸಂಕೀರ್ಣವಾದ ಚುನಾವಣಾ ಪ್ರಕ್ರಿಯೆಯಲ್ಲಿ ಈ ರೀತಿಯ ಕ್ರಾಂತಿಕಾರಿ ನಿರ್ಧಾರವನ್ನು ತೆಗೆದುಕೊಂಡು, ಅದನ್ನು ಅತ್ಯಂತ ಸಮರ್ಪಕವಾಗಿ ಭಾರತದಂತಹ ದೇಶದಲ್ಲಿ ಅನುಷ್ಠಾನಕ್ಕೆ ತರುವುದು ನಿಜಕ್ಕೂ ಒಂದು ಸವಾಲಿನ ಸಂಗತಿಯೇ.

### ಚುನಾವಣಾ ಆವರ್ತನೆ ಹಳಿತಪ್ಪಿದ್ದು ಹೇಗೆ

ಭಾರತದಲ್ಲಿ ಮೊದಲ ಬಾರಿಗೆ ಸಾರ್ವತ್ರಿಕ ಚುನಾವಣೆ ನಡೆದದ್ದು 25 ಅಕ್ಟೋಬರ್ 1951 ಮತ್ತು 21 ಫೆಬ್ರವರಿ 1952ರ ನಡುವೆ. 68 ಹಂತದಲ್ಲಿ ನಡೆದ ಈ ಚುನಾವಣೆಯಲ್ಲಿ ಸುಮಾರು 35 ಕೋಟಿ ಇದ್ದ ಭಾರತದ ಜನಸಂಖ್ಯೆಯಲ್ಲಿ 16 ಕೋಟಿ ಮಂದಿ ಚುನಾವಣೆಯಲ್ಲಿ ಭಾಗಿಯಾಗಿದ್ದರು. ನಂತರ 1957ರಲ್ಲಿ ರಾಜ್ಯ ಮತ್ತು ಲೋಕಸಭೆಗಳಿಗೆ ಏಕಕಾಲದಲ್ಲಿಯೇ ನಡೆದ ಚುನಾವಣೆಯೂ ಸೇರಿದಂತೆ ದೇಶದಲ್ಲಿ 2 ಬಾರಿ 'ಒಂದು ದೇಶ ಒಂದು ಚುನಾವಣೆ' ಯಶಸ್ವಿಯಾಗಿ ನಡೆದಿವೆ. ಆದರೆ ಇದರ ಆವರ್ತನೆ ತಪ್ಪಿದ್ದು ಇದರ ನಂತರದ ಚುನಾವಣೆಯಲ್ಲಿ. 1959ರಲ್ಲಿ ಪ್ರಧಾನಿ ನೆಹರು ಆರ್ಟಿಕಲ್ 356 ಅನ್ನು ಬಳಿಸಿ 1957ರಲ್ಲಿ ಚುನಾಯಿತವಾದ ಕೇರಳದ ಕಮ್ಯುನಿಸ್ಟ್ ಸರಕಾರವನ್ನು ವಜಾ ಮಾಡಿತು. ಅಲ್ಲಿಂದಾಚೆಗೆ 2014ರವರಗೆ ರಾಜಕೀಯ ಹಾಗೂ ಸಾಂವಿಧಾನಿಕ ಕಾರಣಗಳಿಂದ ಒಟ್ಟು 125 ಬಾರಿ ರಾಜ್ಯ ಸರಕಾರಗಳು ಬರ್ಕಾಸ್ತುಗೊಂಡಿವೆ. ಇದರ ಜೊತೆಗೆ, ಭಾಷಾವಾರು ರಾಜ್ಯಗಳ ರಚನೆ, ರಾಜ್ಯಗಳ ವಿಭಜನೆ ಹಾಗೂ ಹೊಸ ರಾಜ್ಯಗಳ ರಚನೆ ಚುನಾವಣೆ ಆವರ್ತನಗಳನ್ನು ಬದಲು ಮಾಡಿತು. ಇದೆಲ್ಲದಕ್ಕಿಂತಲೂ ಮುಖ್ಯವಾಗಿ 1975ರಲ್ಲಿ ಇಂದಿರಾ ಗಾಂಧಿ ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿ ದೇಶದ ಬಹುತೇಕ ಚುನಾಯಿತ ರಾಜ್ಯ ಸರಕಾರಗಳನ್ನು ವಜಾಗೊಳಿಸಿದರು. ಈ ಅಷ್ಟೂ ಘಟನೆಗಳು ದೇಶದಲ್ಲಿ ಒಂದೇ ಆವರ್ತನದಲ್ಲಾಗುತ್ತಿದ್ದ ಚುನಾವಣಾ ಪ್ರಕ್ರಿಯೆಯ ಹಳಿ ತಪ್ಪಿಸಿತು.

### ಭಾರತಕ್ಕೆ ಭಾರವಾದ ವರ್ತಮಾನದ ಚುನಾವಣಾ ವ್ಯವಸ್ಥೆ

ದೇಶದಲ್ಲಿ ಪ್ರಸ್ತುತ ಕೇಂದ್ರಾಡಳಿತ ಪ್ರದೇಶಗಳು ಸೇರಿ 36 ರಾಜ್ಯಗಳು, 2,37,539 ಗ್ರಾಮ ಪಂಚಾಯತ್, 6,326 ಬ್ಲಾಕ್ ಪಂಚಾಯತ್, 655 ಜಿಲ್ಲಾ ಪಂಚಾಯತ್ ಹಾಗೂ 4,946 ನಗರಾಡಳಿತ ವ್ಯವಸ್ಥೆಗಳಿವೆ. ಈ ಕಾರಣದಿಂದಾಗಿಯೇ ದೇಶದಲ್ಲಿ ಪ್ರತೀ ವರ್ಷ ಯಾವುದಾದರೂ 5–6 ರಾಜ್ಯಗಳಲ್ಲಿ ಚುನಾವಣೆ ನಡೆಯುತ್ತಲೇ ಇರುತ್ತದೆ. ಈಗ ಭಾರತೀಯ ಚುನಾವಣಾ ವ್ಯವಸ್ಥೆಯಲ್ಲಿ ಇವಿಎಂ ಬಂದ ಕಾರಣಕ್ಕೆ ಈ ಪರಿಯ ಚುನಾವಣಾ ಒತ್ತಡಗಳನ್ನು ನಿಭಾಯಿಸುವುದು ಸರಕಾರಿ ವ್ಯವಸ್ಥೆಗಳಿಗೆ ಅಸಾಧ್ಯವೇನಿಲ್ಲ. ಈಗ ಭಾರತ ಜಗತ್ತಿನಲ್ಲೇ ಅತ್ಯಂತ ದೊಡ್ಡ ಪ್ರಜಾಪ್ರಭುತ್ವದ ರಾಷ್ಟ್ರ. 2024ರ ಚುನಾವಣೆಯಲ್ಲಿ 96 ಕೋಟಿ ಮತದಾರರು, 10 ಲಕ್ಷ ಚುನಾವಣಾ ಬೂತ್‌ಗಳು, ಜೊತೆಗೆ 1.2 ಕೋಟಿ ಚುನಾವಣಾ ಸಿಬ್ಬಂದಿಗಳನ್ನು ಬಳಸಲಾಗಿತ್ತು. ಇದರಲ್ಲಿ 20 ಲಕ್ಷ ಮಂದಿ ಭದ್ರತಾ ಸಿಬ್ಬಂದಿಗಳಿದ್ದರು. ಈ ಪ್ರಮಾಣದಲ್ಲಿ ಚುನಾವಣೆ ನಡೆಸಲು ಸರಕಾರಿ ಯಂತ್ರಗಳು 1 ವರ್ಷ ಇರುವಾಗಲೇ ಪೂರ್ವ ತಯಾರಿ ನಡೆಸುತ್ತವೆ. ಸುಮಾರು ಮೂರು ತಿಂಗಳುಗಳ ಕಾಲ ನೀತಿಸಂಹಿತೆ ಜಾರಿಯಲ್ಲಿರುತ್ತದೆ. ಈ ಸಮಯದಲ್ಲಿ ಸರಕಾರದ ಅಭಿವೃದ್ಧಿ ಕೆಲಸಗಳು ಸಂಪೂರ್ಣ ಸ್ತಬ್ಧವಾಗುತ್ತದೆ. ಸರಕಾರದ ರಾಜಕೀಯ ನೇತೃತ್ವ ದೇಶದ ಆಡಳಿತದ ಬಗ್ಗೆ ಗಮನ ಹರಿಸುವ ಬದಲು ಚುನಾವಣೆಯತ್ತ ತಮ್ಮ ಗಮನ ಕೇಂದ್ರೀಕರಣ ಮಾಡಬೇಕಾಗುತ್ತದೆ. ಇದರ ಜೊತೆಗೆ ರಾಜಕೀಯ ಪಕ್ಷದ ಕಾರ್ಯಕರ್ತರು ಬೃಹತ್ ಪ್ರಮಾಣದಲ್ಲಿ ತಮ್ಮ ಎಲ್ಲಾ ದೈನಂದಿನ ಕೆಲಸಗಳನ್ನು ಬಿಟ್ಟು ಚುನಾವಣೆಗೆ ಧುಮುಕುತ್ತಾರೆ. ರಾಜ್ಯದ ವಿಧಾನಸಭಾ ಚುನಾವಣೆಗಳು ಮೇಲೆ ಉಲ್ಲೇಖಿಸಿದ ಕಾರಣಗಳಿಂದಾಗಿ ಲೋಕಸಭಾ ಚುನಾವಣೆಯ ಜೊತೆಗೆ ಆಗುತ್ತಿಲ್ಲವಾದುದರಿಂದ ಇವುಗಳನ್ನು ಪ್ರತ್ಯೇಕವಾಗಿ ಮಾಡಬೇಕಾಗುತ್ತಿದೆ. ಇದಲ್ಲದೆ ಜೊತೆಗೆ ವಲಸೆ ಕಾರ್ಮಿಕರ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿರುವ ನಮ್ಮ ದೇಶದಲ್ಲಿ ಇಂತಹ ಅನಿಯಮಿತ ಚುನಾವಣೆಗಳು ಉತ್ಪಾದನಾ ವಲಯಗಳು ಹಾಗೂ ಮೂಲಭೂತ ಸೌಕರ್ಯ ನಿರ್ಮಾಣ ವಲಯಗಳ ಮೇಲೆ ಬಹುದೊಡ್ಡ ಪರಿಣಾಮ ಬೀರಿದೆ. ಇವುಗಳ ಜೊತೆಗೆ ಸ್ಥಳಿಯ ಸಂಸ್ಥೆಗಳ ಚುನಾವಣೆಗಳದ್ದು ಬೇರೆಯೇ ಲೆಕ್ಕ. ಹೀಗೆ ಪ್ರತೀ ವರ್ಷದಲ್ಲಿ ಕನಿಷ್ಠ ಪಕ್ಷ 3–5 ತಿಂಗಳು ಚುನಾವಣೆಯ ಸುತ್ತಲೇ ಗಿರಕಿ ಹೊಡೆದರೆ ದೇಶದ ಅಭಿವೃದ್ಧಿಯ ಕೆಲಸ ಮಾಡುವುದು ಯಾವಾಗ? ಆ ಕಾರಣಕ್ಕೇ ಈ ಭಾರವನ್ನು ತಗ್ಗಿಸಲೆಂದೇ ಒಂದು ರಾಷ್ಟ್ರ ಒಂದು ಚುನಾವಣೆಯ ಕಲ್ಪನೆ ಹುಟ್ಟಿಕೊಂಡಿತು.

### ಒಂದು ರಾಷ್ಟ್ರ ಒಂದು ಚುನಾವಣೆಯ ಕಲ್ಪನೆ

ಪ್ರಥಮ ಬಾರಿಗೆ ಇದರ ಉಲ್ಲೇಖವನ್ನು 1983ರಲ್ಲಿ ಭಾರತೀಯ ಚುನಾವಣಾ ಆಯೋಗ ತನ್ನ ಮೊದಲ ವಾರ್ಷಿಕ ವರದಿಯಲ್ಲಿ ಮಾಡಿತ್ತು. ಅಂದಿನಿಂದ ಕಾನೂನು ಆಯೋಗ, ರಾಷ್ಟ್ರೀಯ ಆಯೋಗ ಮತ್ತು ನೀತಿ ಆಯೋಗಗಳು ಇದರ ಎಲ್ಲಾ ಸಾಧ್ಯತೆಗಳ ಬಗ್ಗೆ ಚರ್ಚಿಸುತ್ತಲೇ ಬಂದಿದ್ದವು. ನಂತರ ಸಂಸತ್ತಿನ 2018ರ ಅಧಿವೇಶನದಲ್ಲಿ ಅಂದಿನ ರಾಷ್ಟ್ರಪತಿಗಳಾಗಿದ್ದ ರಾಮನಾಥ ಕೋವಿಂದ್ ಇದರ ಅವಶ್ಯಕತೆಯನ್ನು ಪ್ರಸ್ತಾಪಿಸಿದ್ದರು. ಅಲ್ಲಿಂದ ನೇಪತ್ಯ ಕಂಡಿದ್ದ ಈ ಚಿಂತನೆ ಮತ್ತೆ ಮುನ್ನೆಲೆಗೆ ಬಂತು. ಇದಾದ ನಂತರ ಪ್ರಧಾನಿ ನರೇಂದ್ರ ಮೋದಿ ಅವರು ನಿರಂತರವಾಗಿ ಪ್ರಸ್ತುತ ದೇಶದ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಯಲ್ಲಿ ಇದರ ಔಚಿತ್ಯದ ಬಗ್ಗೆ ಮಾತನಾಡುತ್ತಲೇ ಬಂದಿದ್ದಾರೆ.

### ಉನ್ನತ ಮಟ್ಟದ ಆಯೋಗದ ರಚನೆ ಮತ್ತು ಶಿಫಾರಸ್ಸುಗಳು

2023ರಲ್ಲಿ ಭಾರತ ಸರಕಾರ, ಮಾಜಿ ರಾಷ್ಟ್ರಪತಿಗಳಾದ ರಾಮನಾಥ್ ಕೋವಿಂದ್ ಅವರ ನೇತೃತ್ವದಲ್ಲಿ ಇದರ ಬಗ್ಗೆ ಅಧ್ಯಯನ ಮಾಡಿ ವಿಸ್ತೃತವಾದ ವರದಿ ಸಲ್ಲಿಸಲು ಉನ್ನತ ಮಟ್ಟದ ಆಯೋಗದ ರಚನೆ ಮಾಡಿತು. ಈ ಸಮಿತಿ ಮಾರ್ಚ್ 14, 2024ರಂದು 18,000 ಪುಟಗಳ ತನ್ನ ವರದಿಯನ್ನು ಸರಕಾರಕ್ಕೆ ಸಲ್ಲಿಸಿತು. ಇದರಲ್ಲಿ ಸಮಿತಿ ಸಾಂವಿಧಾನಿಕ ತಿದ್ದುಪಡಿ ಸೇರಿದಂತೆ ಒಂದಷ್ಟು ಆಡಳಿತಾತ್ಮಕ ಸುಧಾರಣೆಗಳನ್ನು ತರಲು ಸೂಚಿಸಿತು. ಈ ಪಕ್ರಿಯೆಯಲ್ಲಿ ಸಮಿತಿಯು 47 ರಾಷ್ಟ್ರೀಯ ಹಾಗೂ ಪ್ರಾದೇಶಿಕ ರಾಜಕೀಯ ಪಕ್ಷಗಳ ಅಭಿಪ್ರಾಯ ಸಂಗ್ರಹಿಸಿದ್ದು ಅದರಲ್ಲಿ 32 ಪಕ್ಷಗಳು ಇದನ್ನು ಬೆಂಬಲಿಸಿದವು ಮತ್ತು 15 ರಾಜಕೀಯ ಪಕ್ಷಗಳು ಅದನ್ನು ವಿರೋಧಿಸಿದವು. ಈ ಪ್ರಕ್ರಿಯೆಯಲ್ಲಿ ಭಾರತದ ನಾಲ್ವರು ಮಾಜಿ ಮುಖ್ಯ ನ್ಯಾಯಮೂರ್ತಿಗಳೊಂದಿಗೂ ಸಹ ಸಮಾಲೋಚಿಸಲಾಯಿತು. ಇದು ಸಂವಿಧಾನದ ಮೂಲ ಆಶಯಗಳಿಗೆ ವಿರುದ್ಧವಾಗಿಲ್ಲ ಎನ್ನುವ ಕಾರಣಕ್ಕೆ ಅವರೆಲ್ಲರೂ ಇದನ್ನು ಬೆಂಬಲಿಸಿದರು. ದೇಶದ ಉದ್ದಗಲದಿಂದ ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸುವ ನಿಟ್ಟಿನಲ್ಲಿ ಇಮೇಲ್, ವೆಬ್‌ಸೈಟ್ ಮತ್ತು ಅಂಚೆ ಮೂಲಕ ಸ್ವೀಕರಿಸಿದ 21,558 ಅಭಿಪ್ರಾಯಗಳಲ್ಲಿ 80% ಪ್ರತಿಕ್ರಿಯೆಗಳು ಇದರ ಪರವಾಗಿದೆ.

### ಶಿಫಾರಸ್ಸುಗಳು

**ಎರಡು ಹಂತದ ಚುನಾವಣೆ:** ವರದಿಯು ಎರಡು–ಹಂತದ ಚುನಾವಣಾ ವ್ಯವಸ್ಥೆಯನ್ನು ಪ್ರಸ್ತಾಪಿಸಿದೆ, ಇದರಲ್ಲಿ ಲೋಕಸಭೆ ಮತ್ತು ಆಯಾ ರಾಜ್ಯ ಅಸೆಂಬ್ಲಿಗಳಿಗೆ ಚುನಾವಣೆಗಳನ್ನು ಮೊದಲ ಹಂತದಲ್ಲಿ ಮಾಡಬೇಕು. ಇದರ ನಂತರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಸದನದ ಮತ್ತು ರಾಜ್ಯ ವಿಧಾನಸಭೆಗಳ ಚುನಾವಣೆಗಳು ನಡೆದ ನೂರು ದಿನಗಳೊಳಗೆ ನಡೆಸಬೇಕು.

**ಮಧ್ಯಂತರ ಚುನಾವಣೆಗಳು ಮತ್ತು ಅವಧಿಗೂ ಮುನ್ನದ ಚುನಾವಣೆ:** ಸಂವಿಧಾನದಲ್ಲಿ ತಿದ್ದುಪಡಿ ಮಾಡುವ ಮೂಲಕ ಲೋಕಸಭೆ ಅಥವಾ ಯಾವುದೇ ಶಾಸಕಾಂಗ ಸಭೆಗಳು ಮಧ್ಯಾವಧಿಯಲ್ಲಿ ವಿಸರ್ಜಿಸಲ್ಪಟ್ಟರೆ ಅವುಗಳ ಚುನಾವಣೆ ಹಿಂದಿನ ಸರಕಾರದ ಉಳಿದ ಅವಧಿಗಷ್ಟೇ ಮಾಡಬೇಕು.

**ಟ್ರಾನ್ಸಿಟರಿ ನಿಬಂಧನೆಗಳು:** ಈ ಹೊಸ ವ್ಯವಸ್ಥೆಯ ಅಡಿಯಲ್ಲಿ ಒಂದೇ ಆವರ್ತನೆಯಲ್ಲಿ ಲೋಕಸಭೆ ಮತ್ತು ವಿಧಾನಸಭೆಗಳಿಗೆ ಚುನಾವಣೆಗಳನ್ನು ರಚಿಸಲ್ಪಡುವ ಸರಕಾರಗಳು ಆ ದಿನದಿನದ ತನ್ನ ನಿಗದಿಗೊಳಿಸಿದ ಅಷ್ಟೂ ಅವಧಿಗೆ ಇರಬೇಕು ಎನ್ನುವ ಕಾನೂನನ್ನು ಜಾರಿಗೆ ತರಬೇಕು. ಇದೇ ರೀತಿಯ ವ್ಯವಸ್ಥೆ ಸ್ಥಳೀಯ ಸಂಸ್ಥೆಗಳ ಚುನಾವಣೆಗೂ ಮಾಡಬೇಕು.

ಸದ್ಯ ಈ ಮಸೂದೆ ಲೋಕಸಭೆಯಲ್ಲಿ ಮಂಡನೆಗೊಂಡು ಅನುಮೋದನೆಯಾಗಿದೆ. ಏಕ ಕಾಲದಲ್ಲಿ ಕೇಂದ್ರ ಹಾಗೂ ರಾಜ್ಯ ಚುನಾವಣೆಗಳನ್ನು ನಡೆಸಲು ತಾನು ಸನ್ನದ್ಧವಿರುವುದಾಗಿ ಕೇಂದ್ರ ಚುನಾವಣಾ ಆಯೋಗವು ಹೇಳಿದೆ. ಇದು ಜಾರಿಗೆ ಬರುವುದರಿಂದ ಅಪಾರ ಪ್ರಮಾಣದ ಹಣ, ಮಾನವ ಸಂಪನ್ಮೂಲ ವ್ಯರ್ಥವಾಗುವುದು ನಿಲ್ಲುತ್ತದೆ. ಚುನಾವಣಾ ಭ್ರಷ್ಟಾಚಾರವು ಸಹ ಕಡಿಮೆಯಾಗಬಹುದು. ರಾಜಕೀಯ ಕಾರಣಕ್ಕಾಗಿ ದೂರದೃಷ್ಟಿ ತೀರ್ಮಾನಗಳನ್ನು ಕೈಗೊಳ್ಳಲು ಹಿಂದೇಟು ಹಾಕುವ ಅಂಜಿಕೆ ಕಡಿಮೆಯಾಗಿ ಅಭಿವೃದ್ಧಿಪರ ತೀರ್ಮಾನಗಳನ್ನು ಸರ್ಕಾರಗಳು ಕೈಗೊಳ್ಳಲು ಸಾಧ್ಯವಾಗಬಹುದು. ಪದೇ ಪದೇ ಬಂದೆರಗುವ ನೀತಿ ಸಂಹಿತೆಗಳು ಇಲ್ಲವಾಗುವುದರಿಂದ ಪ್ರಗತಿಯ ಯೋಜನೆಗಳು ಮತ್ತು ಕಾಮಗಾರಿಗಳು ನಿರಾತಂಕವಾಗಿ ಮುಂದುವರೆಯುತ್ತವೆ. ■

## ಸಂಸ್ಮರಣೆ ಪದ್ಮಭೂಷಣ ಝಾಕೀರ್ ಹುಸೇನ್ (9 ಮಾರ್ಚ್, 1951 – 15 ಡಿಸೆಂಬರ್ 2024)



ಅವರು ವೇದಿಕೆ ಏರಿ ಕೂತರೆ ಧ್ಯಾನಸ್ಥ ತಪಸ್ವಿ. ಅವರು ತಬಲಾದೊಂದಿಗೆ ಮಾತಿಗಿಳಿಯುತ್ತಿದ್ದರು. ತಟ್ಟಿ ಎಬ್ಬಿಸುತ್ತಿದ್ದರು. ಅವರ ಕೈ ಬೆರಳುಗಳು ನಾಟ್ಯವಾಡುತ್ತಿದ್ದವು. ಮುಂಗುರುಳು ಕುಣಿಸಿಕೊಂಡು ಗಂಟೆಗಟ್ಟಲೆ ನುಡಿಸುತ್ತಲೇ ಇರುತ್ತಿದ್ದರು. ತಬಲಾದ ಬೋಲ್‌ಗಳು ಲಲ್ಲೆಗರೆಯುವ ಮಗುವಿನಂತೆ, ತುಸು ಹೊತ್ತಿಗೆ ರಚ್ಚೆ ಹಿಡಿಯುವ ಕೈಗೂಸಿನಂತೆ, ಜಗಳಕ್ಕೆ ಮೈ ಮೇಲೆ ಬೀಳುವ ಘಟವಾಣಿ ಹೆಂಗಸಿನ ಧ್ವನಿಯಂತೆ ಕೇಳಿಸುತ್ತಿತ್ತು. ಅಲ್ಲಿ ಶಾಂತವಾದ ನದಿ ಹರಿಯುತ್ತಿತ್ತು. ಮಿಂಚು ಗುಡುಗು ಸಹಿತ ರಭಸವಾದ ಮಳೆ ಸುರಿಯುತ್ತಿತ್ತು. ಸಂಗೀತ ರಸಿಕರು "ವ್ಹಾವ್ ವ್ಹಾವ್" ಎಂದು ಉದ್ಗರಿಸುತ್ತಿದ್ದರು. ಆ ಮಾಂತ್ರಿಕನ ಹೆಸರು ಝಾಕಿರ್ ಹುಸೇನ್. ತಮ್ಮ ಕಲಾ ಪ್ರತಿಭೆಯಿಂದ ಅಸಂಖ್ಯಾತರನ್ನು ಕಾಡಿದವರು ಮತ್ತು ಆವರಿಸಿಕೊಂಡವರು. ಸಹ ವಾದ್ಯವಾಗಷ್ಟೇ ಉಳಿದುಕೊಂಡಿದ್ದ ತಬಲಾಗೆ ವಿಶ್ವ ಮಾನ್ಯತೆ ತಂದುಕೊಟ್ಟವರು.

**ಮಾಂತ್ರಿಕ ಕಲಾವಿದ:** ಝಾಕಿರ್ ಹುಸೇನ್ ಮಾರ್ಚ್ 9, 1951ರಲ್ಲಿ ಜನಿಸಿದವರು. ಪ್ರಸಿದ್ಧ ತಬಲಾ ವಾದಕ ಉಸ್ತಾದ್ ಅಲಾ ರಖಾ ಇವರ ತಂದೆ. ತನ್ನ ತಂದೆಯ ಪ್ರಭಾವದಿಂದ ಎರಡು ವರ್ಷದ ಮಗುವಾಗಿದ್ದಾಗಲೇ ತಬಲಾದ ಬೋಲ್‌ಗಳನ್ನು ಅರಿತುಕೊಂಡರು. ಬೆಳಗ್ಗೆ ಮೂರು ಗಂಟೆಯಿಂದ ಆರು ಗಂಟೆವರೆಗೆ ತಬಲಾ ರಿಯಾಜ್ ನಡೆಸುತ್ತಿದ್ದರು. ಝಾಕಿರ್ ಹನ್ನೆರಡನೇ ವಯಸ್ಸಿಗೆ ತಮ್ಮ ಮೊದಲ ಕಛೇರಿ ನೀಡಿದ ಅಸಾಮಾನ್ಯ ಸಾಧಕ. ಇನ್ನು ತಮ್ಮ ಹದಿನೆಂಟನೇ ವಯಸ್ಸಿನಲ್ಲೇ ಸಂಗೀತ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪಡೆದುಕೊಂಡ ಅಪರೂಪದ ಕಲಾನಿಧಿ. ಪದ್ಮಶ್ರೀ ಮತ್ತು ಪದ್ಮಭೂಷಣ ಪ್ರಶಸ್ತಿ ಪಡೆದ ಅತ್ಯಂತ ಕಿರಿಯ ತಾಳವಾದ್ಯ ಕಲಾವಿದ. ಶ್ವೇತಭವನದಲ್ಲಿ ಆಯೋಜಿಸಿದ್ದ 'ಆಲ್ ಟೈಮ್ ಗ್ಲೋಬಲ್ ಸ್ಟಾರ್' ಕಾರ್ಯಕ್ರಮಕ್ಕೆ ಅಮೆರಿಕ ಅಧ್ಯಕ್ಷ ಬರಾಕ್ ಒಬಾಮರಿಂದ ಆಹ್ವಾನಿಸಲ್ಪಟ್ಟ ಮೊತ್ತ ಮೊದಲ ಭಾರತೀಯ ಸಂಗೀತಗಾರ. ಅಷ್ಟೇ ಅಲ್ಲ ಝಾಕಿರ್ ಹುಸೇನ್ ನಾಲ್ಕು ಬಾರಿ ಪ್ರತಿಷ್ಠಿತ ಗ್ರ್ಯಾಮಿ ಪ್ರಶಸ್ತಿ ಪಡೆದು ಭಾರತದ ಕೀರ್ತಿಯನ್ನು ಉತ್ತುಂಗಕ್ಕೆ ಏರಿಸಿದವರು.

**ನಾಮಕರಣದಲ್ಲಿ ಮಗುವಿನ ಕಿವಿಯಲ್ಲಿ ತಾಳ ಪಿಸುಗುಟ್ಟಿದ್ದ ಅಲಾ ರಖಾ:** ಝಾಕಿರ್ ಹುಸೇನ್ ಅವರ ಬದುಕಿನ ನೆನಪುಗಳನ್ನು ಅವರದ್ದೇ ಮಾತಿನಲ್ಲಿ ಕೇಳಿ "ನಾನಾಗ ಕೈಗೂಸು. ಇಸ್ಲಾಂ ಸಂಪ್ರದಾಯದಂತೆ ನಾಮಕರಣ ಮಾಡುವಾಗ ಮಗುವಿನ ಕಿವಿಯಲ್ಲಿ ಇಸ್ಲಾಂ ಮತದ ಪ್ರಾರ್ಥನೆ ಪಠಿಸಬೇಕು. ಜೊತೆಗೆ ಒಂದಿಷ್ಟು ಒಳ್ಳೆಯ ಮಾತುಗಳನ್ನು ಹೇಳಬೇಕು. ಆದರೆ ನನ್ನ ತಂದೆ ಹಾಗೆ ಮಾಡಲಿಲ್ಲ. ಬದಲಿಗೆ ಅವರು, 'ತಟಕಿಟ ಧಿನ್ನಾಕಿಟ' ಎನ್ನುವ ತಾಳ ಹೇಳಿದರು. ಇದೇನು ಮಾಡುತ್ತಿದ್ದೀರಿ ಎಂದು ನನ್ನ ಅಮ್ಮ ಅಪ್ಪನನ್ನು ಕೇಳಿದಾಗ, ಅವರು ನಾನು ಸರಸ್ವತಿ ಮತ್ತು ಗಣೇಶನ ಆರಾಧಕ. ನಾನು ನುಡಿಸುವ ಸಂಗೀತವೇ ನನ್ನ ಪಾಲಿನ ಪ್ರಾರ್ಥನೆ. ಆ ಸರಸ್ವತಿಯ ಮಂತ್ರವನ್ನೇ ಮಗುವಿನ ಕಿವಿಯಲ್ಲಿ ಹೇಳುತ್ತಿದ್ದೇನೆ. ಇದೇ ವಿದ್ಯೆಯನ್ನೇ ನಾನು ನನ್ನ ಗುರುಗಳಿಂದ ಕಲಿತಿರುವುದು. ನನ್ನ ಮಗನೂ ನನ್ನ ಪರಂಪರೆಯನ್ನೇ ಮುಂದುವರಿಸಬೇಕೆಂಬುದು ನನ್ನ ಆಸೆ ಎಂದರು" ಹೀಗೆ ಸಂದರ್ಶನವೊಂದರಲ್ಲಿ ಝಾಕಿರ್ ಹುಸೇನ್ ತಮ್ಮ ತಂದೆಯ ಬಗ್ಗೆ ಪ್ರೀತಿಯಿಂದ ಮಾತನಾಡಿದ್ದರು.

**ಗೆಳೆಯನ ಹೆಣಕ್ಕೆ ಹೆಗಲು ಕೊಟ್ಟಿದ್ದ ಝಾಕಿರ್:** ಝಾಕಿರ್ ಹುಸೇನ್ ತಮ್ಮ ಪ್ರತಿಭೆಯಿಂದಷ್ಟೇ ಅಲ್ಲದೆ ಗುಣ ನಡತೆಯಿಂದಲೂ ಎತ್ತರಕ್ಕೇರಿದ್ದವರು. ಝಾಕಿರ್ ತಮ್ಮ ನಿಡುಗಾಲದ ಗೆಳೆಯ ಖ್ಯಾತ ಸಂತೂರ್ ವಾದಕ ಪಂಡಿತ್ ಶಿವಕುಮಾರ ಶರ್ಮಾ ಅವರು ತೀರಿಕೊಂಡಾಗ (2022) ಸ್ಮಶಾನದವರೆಗೂ ಅವರ ಹೆಣಕ್ಕೆ ಹೆಗಲು ಕೊಟ್ಟಿದ್ದರು. ಅದು ಝಾಕಿರ್ ಹುಸೇನ್ ಅವರಿಗಿದ್ದ ಹೃದಯ ಶ್ರೀಮಂತಿಕೆ. ಅವರು ಜಾತಿ ಮತ್ತು ಧರ್ಮವನ್ನು ಮೀರಿ ನಿಂತಿದ್ದವರು. ಪ್ರೀತಿ ಮತ್ತು ಮಾನವೀಯತೆ ಒಂದೇ ನಿಜಧರ್ಮ ಎಂದು ಅರಿತಿದ್ದವರು.

**ವಾದ್ಯದಲ್ಲಿ ಲೀನ:** ಒಂದಿಡೀ ತಲೆಮಾರಿನ ಜನರಿಗೆ ತಬಲಾದ ಗುಂಗು ಹಿಡಿಸಿದ ಝಾಕಿರ್ ಹುಸೇನ್ 15–12–2024ರಂದು ಇಹಲೋಕ ತ್ಯಜಿಸಿ ವಾದ್ಯದಲ್ಲಿ ಲೀನವಾದರು. ಒಬ್ಬ ಕಲಾವಿದ ಸತ್ತರೆ ಜಗತ್ತಿನಲ್ಲಿ ತುಸು ದುಃಖ ಹೆಚ್ಚಾಗುತ್ತದೆ ಎಂಬ ಮಾತಿನಂತೆ ಝಾಕಿರ್ ಹುಸೇನ್ ಅವರ ಮರಣ ಸಂಭವಿಸಿದೆ.

## ಬಾಂಗ್ಲಾದೇಶ: ಹಿಂದೂ ಅಸ್ತಿತ್ವಕ್ಕೆ ಸವಾಲು

**ಪ್ರಕಾಶಕರು:** ವಿಶ್ವ ಸಂವಾದ ಕೇಂದ್ರ, ಕರ್ನಾಟಕ
**ಬೆಲೆ:** 25 ರೂ.

ಪುಸ್ತಕ ಪರಿಚಯ

ಬಾಂಗ್ಲಾದೇಶದಲ್ಲಿ ಹಿಂದೂಗಳ ಹಾಗೂ ಇತರ ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ ಇಸ್ಲಾಮಿಕ್ ಉಗ್ರಗಾಮಿಗಳು ನಡೆಸುತ್ತಿರುವ ದೌರ್ಜನ್ಯಗಳು, ದಾಳಿ, ಹತ್ಯೆ, ದರೋಡೆ, ಬೆಂಕಿ ಹಚ್ಚುವುದು, ಮಹಿಳೆಯರ ಮೇಲೆ ನಡೆಯುತ್ತಿರುವ ಅಮಾನವೀಯ ಕಿರುಕುಳ ಎಚ್ಚರಿಕೆಯ ಕರೆಗಂಟೆಯಾಗಿದೆ. ಇಂತಹ ಘಟನೆಗಳನ್ನು ತಡೆಯಲು ಸೂಕ್ತ ಕ್ರಮ ಕೈಗೊಳ್ಳುವ ಬದಲು ಬಾಂಗ್ಲಾದೇಶದ ಪ್ರಸ್ತುತ ಸರ್ಕಾರ ಹಾಗೂ ಇತರ ಸಂಬಂಧಿತ ಸಂಸ್ಥೆಗಳು ಮೂಕ ಪ್ರೇಕ್ಷಕರಾಗಿ ನಿಂತಿದೆ. ಅಸಹಾಯಕತೆಯಿಂದ, ಬಾಂಗ್ಲಾದೇಶೀ ಹಿಂದೂಗಳು ತಮ್ಮ ಸ್ವ ರಕ್ಷಣೆಗಾಗಿ ಪ್ರಜಾಸತ್ತಾತ್ಮಕವಾಗಿ ಧ್ವನಿ ಎತ್ತಿದಾಗ ಅವರ ಧ್ವನಿಯನ್ನು ಹತ್ತಿಕ್ಕಲು ಅಮಾನವೀಯ ಪ್ರಯತ್ನಗಳಾಗಿವೆ. ಹಿಂದೂಗಳ ಶಾಂತಿಯುತ ಪ್ರತಿಭಟನೆಯ ನೇತೃತ್ವ ವಹಿಸಿದ್ದ ಇಸ್ಕಾನ್ ಸನ್ಯಾಸಿ ಪೂಜ್ಯ ಶ್ರೀ ಚಿನ್ಮಯ್ ದಾಸ್ ಅವರನ್ನು ಬಾಂಗ್ಲಾದೇಶದ ಸರ್ಕಾರ ಬಂಧಿಸಿದೆ. ಬಾಂಗ್ಲಾದೇಶದಲ್ಲಿ ಹಿಂದೂಗಳ ಹಾಗೂ ಇತರ ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ತಡೆಗಟ್ಟಲು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನೂ ಮುಂದುವರಿಸಲು ಹಾಗೂ ಅಂತಾರಾಷ್ಟ್ರೀಯ ಬೆಂಬಲವನ್ನು ಪಡೆಯಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಲು ಭಾರತ ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಲಾಗುತ್ತಿದೆ. ಬಾಂಗ್ಲಾದೇಶದಲ್ಲಾಗುತ್ತಿರುವ ಈ ಎಲ್ಲಾ ಸಂಗತಿಗಳಾಧಾರಿತ ವಾಸ್ತವಾಂಶಗಳು ಹಾಗೂ ಹೆಚ್ಚುತ್ತಿರುವ ಮೂಲಭೂತವಾದಿ ಮನಸ್ಥಿತಿಗಳ ಕುರಿತು ಅಂಕಿಅಂಶಗಳೊಂದಿಗೆ ತಿಳಿಸಿಕೊಡುವ ಪುಸ್ತಕ ಇದಾಗಿದೆ.





ಪುಸ್ತಕಕ್ಕಾಗಿ ಸಂಪರ್ಕಿಸಿ: 6360581957

## ಟ್ರಾಫಿಕ್ ನಿಯಮಗಳನ್ನು ಪಾಲಿಸಿ

'ನಿಯಮಗಳಿರುವುದೇ ಮುರಿಯುವುದಕ್ಕಾಗಿ' ಎಂಬ ವಾಕ್ಯ ಅನೇಕ ಬಾರಿ ಮುನ್ನೆಲೆಗೆ ಬರುತ್ತದೆ. ಇತ್ತೀಚೆಗೆ ಇಂತಹ ವಾಕ್ಯಗಳು ಫ್ಯಾಷನ್ ಕೂಡ ಆಗಿವೆ. ಆದರೆ ಇದು ನಾಗರಿಕ ಸಮಾಜಕ್ಕೆ ಮಾದರಿಯಲ್ಲ. ಜಗತ್ತಿನ ಅತ್ಯಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ರಾಷ್ಟ್ರವಾದ ಭಾರತ ಅದರ ಕಾರಣಕ್ಕಾಗಿಯೇ ಅತಿ ಹೆಚ್ಚು ವಾಹನಗಳನ್ನು ಬಳಸುವ ದೇಶಗಳಲ್ಲೊಂದಾಗಿದೆ. ಹಾಗಾಗಿ ಟ್ರಾಫಿಕ್ ನಿಯಮಗಳ ಪಾಲನೆಯೂ ರಾಷ್ಟ್ರದ ಹಿತಾಸಕ್ತಿಯಿಂದಲೂ, ವೈಯಕ್ತಿಕ ಹಿತಾಸಕ್ತಿಯಿಂದಲೂ ನಮಗೆ ಅಗತ್ಯವಾಗಿದೆ. ಅಪಘಾತಗಳನ್ನು ತಡೆಗಟ್ಟುವುದು ಮತ್ತು ಜೀವಗಳನ್ನು ಉಳಿಸುವುದಕ್ಕಾಗಿ, ಸುಗಮ ಸಂಚಾರದ ಹರಿವನ್ನು ಹೆಚ್ಚಿಸುವುದಕ್ಕಾಗಿ, ದುರ್ಬಲ ರಸ್ತೆ ಬಳಕೆದಾರರನ್ನು ರಕ್ಷಿಸುವುದಕ್ಕಾಗಿ, ಕಾನೂನು ಪರಿಣಾಮಗಳಿಗೆ ಒಳಗಾಗದೇ ಇರುವುದಕ್ಕಾಗಿ, ಆರ್ಥಿಕವಾಗಿಯೂ ಹೆಚ್ಚು ಖರ್ಚಾಗದಂತೆ ನೋಡಿಕೊಳ್ಳುವುದಕ್ಕಾಗಿ, ಗೌರವ ಮತ್ತು ಜವಾಬ್ದಾರಿಯ ಸಂಸ್ಕೃತಿಯನ್ನು ಉತ್ತೇಜಿಸುವುದಕ್ಕಾಗಿ, ಪರಿಸರವನ್ನು ಸಂರಕ್ಷಿಸುವುದಕ್ಕಾಗಿ ಟ್ರಾಫಿಕ್ ನಿಯಮಗಳ ಪಾಲನೆ ಅತ್ಯಗತ್ಯ. ನಾಗರಿಕ ಸಮಾಜದ ಜವಾಬ್ದಾರಿ.

ನಾಗರಿಕ ಶಿಷ್ಟಾಚಾರ




## ನನಸಾದ ಕನಸುಗಳು – ಯಮಗರವಾಡಿ

ಸೇವಾಗಾಥಾ

ಮಹಾರಾಷ್ಟ್ರದ ನಾಂದೇಡ್ ಜಿಲ್ಲೆಯಲ್ಲಿ ಕಿನವಟ್ ಸಮೀಪ ಒಂದು ಸಣ್ಣ ಹಳ್ಳಿಯಿದೆ, ಪಾಟೋದಾ. ಇಲ್ಲಿಯೇ ರೇಖಾ ತನ್ನ ತಾಯಿತಂದೆಯರೊಡನೆ ಇರುತ್ತಿದ್ದಳು. ಪಾರಧೀ ಜಾತಿಯ ಈ ಪರಿವಾರಗಳ ಕಸುಬೇ ಡಕಾಯಿತಿ ಆಗಿತ್ತು. ಪಾರಧೀ ಜೊತೆಗೆ ಡೋಂಬರೀ, ಕೋಲಹಾಟೀ, ಗೋಂಧೀ ಇತ್ಯಾದಿ ಜಾತಿಗಳು ಮಹಾರಾಷ್ಟ್ರದ ಈ ಎಲ್ಲ ಜಾತಿಯ ಪಂಗಡಗಳೂ ಸಮಾಜದಲ್ಲಿ ದೋಷಪೂರಿತ/ತಪ್ಪಿತಸ್ಥ ಪಂಗಡಗಳೆಂದೇ ಭಾವಿಸಲ್ಪಟ್ಟಿವೆ. ಈ ಕಾರಣದಿಂದಲೇ, ತಾಯಿತಂದೆ ಇಲ್ಲವಾದಾಗ ರೇಖಾ ಮತ್ತು ಅವಳ ಒಡಹುಟ್ಟಿದವರನ್ನು ನೋಡಿಕೊಳ್ಳಲು ಸಮಾಜ ಮುಂದೆ ಬರಲಿಲ್ಲ.

ಆದರೆ ಈಗ ಎಲ್ಲವೂ ಬದಲಾಗಿದೆ. ಚೆಸ್ ಆಟದಲ್ಲಿ ರಾಜ್ಯಮಟ್ಟದ ಆಟಗಾರ್ತಿಯಾಗಿದ್ದ ರೇಖಾ, ಈಗ ಮುಂಬಯಿಯ ಫೋರ್ಟಿಸ್ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅವಳ ತಮ್ಮ ಅರ್ಜುನನಿಗೆ ಹತ್ತನೇ ತರಗತಿಯಲ್ಲಿ 85% ಅಂಕಗಳು ಲಭಿಸಿವೆ. ರೇಖಾ ಮತ್ತು ಅರ್ಜುನ್ ಅವರಂತೆಯೇ ಅಲೆಮಾರಿಗಳಾಗಿದ್ದ 350 ಮಕ್ಕಳು ವಿಮುಕ್ತ ವಿಕಾಸ ಪರಿಷತ್‌ನ ಶಾಲೆಯಲ್ಲಿ ಅಭ್ಯಸಿಸುತ್ತ, ಓದು, ಕ್ರೀಡೆ, ನಟನೆ, ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಒಳ್ಳೆಯ ಫಲಿತಾಂಶವನ್ನು ತೋರುತ್ತಿದ್ದಾರೆ.



ಕಳೆದ 25 ವರ್ಷಗಳಿಂದ ಪರಿಷತ್ತಿನ ಕಾರ್ಯಕರ್ತರು ಈ ಬಂಜಾರಾ ಜಾತಿಯ ಮಕ್ಕಳ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ. ಸಂಘದ ಕಾರ್ಯಕರ್ತರೂ ಹಾಗೂ ಹಿಂದಿನ ಪ್ರಚಾರಕರಾಗಿದ್ದ ಗಿರೀಶ ಪ್ರಭುಣೇ ಅವರ ಅವಿರತ ಶ್ರಮದಿಂದ 1993ರ ಆಗಸ್ಟ್ 23ರಂದು ಯಮಗರವಾಡಿಯಲ್ಲಿ ಸ್ವಲ್ಪ ಜಾಗವನ್ನು ಹಸನು ಮಾಡಿ ಸ್ಥಾಪಿಸಲಾದ ಜೋಪಡಿಯಲ್ಲಿ 6 ಮಕ್ಕಳೊಂದಿಗೆ ವಿದ್ಯಾರ್ಥಿನಿಲಯವು ಪ್ರಾರಂಭವಾಯಿತು. ಸಮಾಜದ ಸಹಯೋಗ ಹಾಗೂ ಮಹಾದೇವ ಗಾಯಕವಾಡ, ಚಂದ್ರಕಾಂತ ಗಡೇಕರ್ ಮತ್ತು ರಾವ್ ಸಾಹೇಬ ಕುಲಕರ್ಣಿ ಅವರಂಥ ಕಾರ್ಯಕರ್ತರ ಪರಿಶ್ರಮವು ಫಲನೀಡಿತು. ಇಂದು ಸಂಸ್ಥೆಯು ತನ್ನದೇ ದೊಡ್ಡ ವಿದ್ಯಾರ್ಥಿನಿಲಯವಲ್ಲದೇ, ಮಕ್ಕಳಿಗೆ ಶಿಕ್ಷಣದ ಜೊತೆಜೊತೆಗೆ ವೃತ್ತಿಕೌಶಲ್ಯ ತರಬೇತಿ ನೀಡುವ ಅತ್ಯಾಧುನಿಕ ಶಾಲೆಯನ್ನು ಹೊಂದಿದೆ.

ಮಹಾರಾಷ್ಟ್ರದ ಉಸ್ಮಾನಾಬಾದ್ ಜಿಲ್ಲೆಯ ತುಳಜಾಪುರ ತಾಲೂಕಿನಲ್ಲಿ ಇರುವ ಯಮಗರವಾಡೀ ಈಗ ದೇಶದಲ್ಲಿ ಪರಿಚಿತ ಹೆಸರು. ಅಪರಾಧಿಗಳೆಂದು ಭಾವಿಸಲ್ಪಡುವ ಈ ವನವಾಸಿ ಮಕ್ಕಳಿಗೋಸ್ಕರ ಸಂಘದ ಕಾರ್ಯಕರ್ತರು ಅವಿರತ ಶ್ರಮವಹಿಸಿ ಶಾಲೆಯನ್ನು ಪ್ರಾರಂಭಿಸಿದ ಈ ಅದ್ಭುತ ಕಾರ್ಯ ದೇಶದೆಲ್ಲೆಡೆ ಮನೆಮಾತಾಗಿದೆ. ಯಾವ ಇಲಾಖೆಯಲ್ಲಿ ಹತ್ಯೆ ಅಥವಾ ಲೂಟಿಯಂಥ ಯಾವುದೇ ಘಟನೆ ನಡೆದಾಗಲೂ ಪೊಲೀಸರು ಮೊದಲು ಪಾರಧೀ ಅಥವಾ ಕೋಟೀ ಸಮಾಜದವರನ್ನೇ ಅಪರಾಧಿಗಳೆಂದು ಪರಿಗಣಿಸಿ ಎಳೆದುಕೊಂಡು ಹೋಗುತ್ತಿದ್ದರೋ, ಈಗ ಅದೇ ಪರಿವಾರಗಳ 32 ಹೆಣ್ಣುಮಕ್ಕಳು ಬೇರೆಬೇರೆ ಆಸ್ಪತ್ರೆಗಳಲ್ಲಿ ದಾದಿಯರಾಗಿದ್ದಾರೆ.

ಇದೆಲ್ಲ ಇಷ್ಟು ಸುಲಭವಾಗಿರಲಿಲ್ಲ. ಮಕ್ಕಳಿಗೆ ಯೋಗ, ವ್ಯಾಯಾಮ ಮತ್ತು ಮಂತ್ರ ಹೇಳಿಕೊಡುವುದು ಅತ್ಯಂತ ಕಷ್ಟಕರವಾಗಿತ್ತು. ಇಂದು ಇವರಿಗೆಂದೇ ಏಕಲವ್ಯ ವ್ಯಾಯಾಮ ಶಾಲೆ ಇದೆ. ಇಲ್ಲಿ ಇವರೆಲ್ಲರೂ ನಿತ್ಯವೂ ವ್ಯಾಯಾಮ ಮಾಡುತ್ತಾರೆ. ಒಂದು ದೊಡ್ಡ ಗ್ರಂಥಾಲಯವಿದೆ, ಅದರಲ್ಲಿ ರೈಲ್ವೆ, ಬ್ಯಾಂಕ್ ಪರೀಕ್ಷೆಗಳಿಗೆ ತಯಾರಿ ನೀಡುವಂಥ ಪುಸ್ತಕಗಳಿವೆ. ತಮ್ಮ ತಮ್ಮ ಇಚ್ಛೆಗೆ ಅನುಸಾರವಾಗಿ ಮಕ್ಕಳಿಗೆ ಪ್ಲಂಬರ್, ಎಲೆಕ್ಟ್ರೀಶಿಯನ್ ಕೆಲಸಗಳಿಗೆ ತರಬೇತಿ ಕೊಡಲಾಗುತ್ತದೆ. ಪ್ರತೀ ವರ್ಷವೂ ನಡೆಯುವ ವಿಜ್ಞಾನಮೇಳದಲ್ಲಿ ಇಲ್ಲಿನ ಮಕ್ಕಳು ಪ್ರಸ್ತುತಪಡಿಸುವ ವಿಜ್ಞಾನ ಮಾದರಿಗಳು ಹಲವು ಬಹುಮಾನಗಳನ್ನು ಪಡೆಯುತ್ತವೆ. ಸಂಘದ ಒಂದು ಅದ್ಭುತ ಪರಿಕಲ್ಪನೆಯಡಿ ಯಮಗರವಾಡಿ ಪ್ರಕಾಶಿಸುತ್ತಿದೆ.

**ಸಂಪಾದಕೀಯ ಸಹಕಾರ:** ಅಜಿತ್ ಶೆಟ್ಟಿ ಹೆರಂಜೆ, ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ಗಿರಿಧರ ಉದ್ಯಾವರ, ದೀಕ್ಷಿತ್ ನಾಯರ್ ಮಂಡ್ಯ, ಪಂಚಮಿ ಬಾಕಿಲಪದವು

### 7 ಕೋಟಿಗೂ ಅಧಿಕ ಚಂದಾದಾರರನ್ನು ಪಡೆದ ಅಟಲ್ ಪಿಂಚಣಿ ಯೋಜನೆ

Atal Pension Yojana

ಇತ್ತೀಚೆಗೆ ಅಟಲ್ ಪಿಂಚಣಿ ಯೋಜನೆ (APY)ಯು ಮಹತ್ವದ ಮೈಲಿಗಲ್ಲು ಸಾಧಿಸಿದೆ. ಡಿಸೆಂಬರ್ 2, 2024ರಂತೆ 7.15 ಕೋಟಿ ಚಂದಾದಾರರು ಈ ಯೋಜನೆಯಡಿ ನೋಂದಾಯಿಸಿಕೊಂಡಿದ್ದಾರೆ. ನಿವೃತ್ತಿಯ ನಂತರದ ವರ್ಷಗಳಲ್ಲಿ ಭಾರತದ ದುಡಿಯುವ ಜನಸಂಖ್ಯೆಗೆ ಆರ್ಥಿಕ ಭದ್ರತೆಯನ್ನು ಒದಗಿಸಲು ಈ ಯೋಜನೆಯನ್ನು ಪ್ರಾರಂಭಿಸಲಾಗಿದ್ದು ಪಿಂಚಣಿ ಯೋಜನೆ ಚಂದಾದಾರರು ನೀಡಿದ ಕೊಡುಗೆಗಳ ಆಧಾರದ ಮೇಲೆ 60 ವರ್ಷ ಮೇಲ್ಪಟ್ಟವರಿಗೆ ರೂ. 1,000 ರಿಂದ ರೂ 5,000 ರವರೆಗಿನ ಕನಿಷ್ಠ ಮಾಸಿಕ ಪಿಂಚಣಿಯನ್ನು ಈ ಯೋಜನೆ ಖಾತರಿಪಡಿಸುತ್ತದೆ. ಒಟ್ಟು ಚಂದಾದಾರರಲ್ಲಿ ಶೇಕಡಾ 47 ರಷ್ಟು ಪಾಲು ಮಹಿಳೆಯರು ಹೊಂದಿದ್ದಾರೆ.

### ಹರ್ ಘರ್ ಜಲ್ ಅಡಿ 15.34 ಕೋಟಿ ಗ್ರಾಮೀಣ ಕುಟುಂಬಗಳಿಗೆ ನಲ್ಲಿ ನೀರಿನ ಸಂಪರ್ಕ

Har Ghar Jal
Jal Jeevan Mission

ಜಲ ಜೀವನ್ ಮಿಷನ್ (ಜೆಜೆಎಂ) - ಹರ್ ಘರ್ ಜಲ್ ಅಡಿಯಲ್ಲಿ 15.34 ಕೋಟಿಗೂ ಹೆಚ್ಚು ಗ್ರಾಮೀಣ ಕುಟುಂಬಗಳು ತಮ್ಮ ಮನೆಗಳಿಗೆ ನಲ್ಲಿ ನೀರಿನ ಪೂರೈಕೆಯ ಸೌಲಭ್ಯವನ್ನು ಪಡೆದುಕೊಂಡಿವೆ ಎಂದು ಕೇಂದ್ರ ಸರ್ಕಾರ ಮಾಹಿತಿ ನೀಡಿದೆ. ದೇಶದಲ್ಲಿ 19.35 ಕೋಟಿ ಗ್ರಾಮೀಣ ಕುಟುಂಬಗಳಿವೆ ಮತ್ತು ಈ ಪೈಕಿ ಇಲ್ಲಿಯವರೆಗೆ 79.28 ಪ್ರತಿಶತದಷ್ಟು ಜಲ ಜೀವನ್ ಮಿಷನ್ (ಜೆಜೆಎಂ) ವ್ಯಾಪ್ತಿಗೆ ಒಳಪಟ್ಟಿವೆ. ಆಗಸ್ಟ್ 2019ರಲ್ಲಿ ಜಲ ಜೀವನ್ ಮಿಷನ್ ಪ್ರಾರಂಭದಲ್ಲಿ ಕೇವಲ 3.23 ಕೋಟಿ ಗ್ರಾಮೀಣ ಕುಟುಂಬಗಳು ನಲ್ಲಿ ನೀರಿನ ಸಂಪರ್ಕವನ್ನು ಹೊಂದಿದ್ದವು. ಭಾರತ ಸರ್ಕಾರದ ಜಲ ಶಕ್ತಿ ಸಚಿವಾಲಯವು 2019ರಲ್ಲಿ ಜಲ ಜೀವನ್ ಮಿಷನ್ ಅನ್ನು ಪ್ರಾರಂಭಿಸಿದ್ದು, ಪ್ರತಿ ಗ್ರಾಮೀಣ ಮನೆಗಳಿಗೆ ಪ್ರತಿ ದಿನಕ್ಕೆ ನಿಯಮಿತವಾಗಿ 55 ಲೀಟರ್ ನಲ್ಲಿ ನೀರನ್ನು ಒದಗಿಸುವ ಗುರಿಯನ್ನು ಹೊಂದಿದೆ.

## ಸಾಲುದ್ದದ ಸುದ್ದಿಗಳು

### 2022-2023 ರಲ್ಲಿ 7 ಕೋಟಿ ಉದ್ಯೋಗಗಳನ್ನು ಸೃಷ್ಟಿಸಿದೆ ಪ್ರವಾಸೋದ್ಯಮ ಕ್ಷೇತ್ರ

ಕಳೆದ ಹತ್ತು ವರ್ಷಗಳಲ್ಲಿ ಜಾಗತಿಕ ಪ್ರಯಾಣ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ ಸೂಚ್ಯಂಕದಲ್ಲಿ ಭಾರತದ ಶ್ರೇಯಾಂಕವು 65 ರಿಂದ 39ನೇ ಸ್ಥಾನಕ್ಕೆ ಜಿಗಿದಿದೆ. 2022 ರಿಂದ 2023ರ ಅವಧಿಯಲ್ಲಿ ಪ್ರವಾಸೋದ್ಯಮ ಕ್ಷೇತ್ರವು ಏಳು ಕೋಟಿಗೂ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಿದೆ. ಈ ಹಿನ್ನೆಲೆಯಲ್ಲಿ ದೇಶದ ಹತ್ತು ಸಾವಿರ ವರ್ಷಗಳ ವಿಕಾಸವನ್ನು ಪ್ರದರ್ಶಿಸಲು ರಾಷ್ಟ್ರಪತಿ ಭವನದ ಮುಂದೆ ವಿಶ್ವದ ಅತಿದೊಡ್ಡ ವಸ್ತುಸಂಗ್ರಹಾಲಯವನ್ನು ನಿರ್ಮಿಸುವ ಯೋಜನೆಯನ್ನು ಸರ್ಕಾರ ಹೊಂದಿದೆ ಎಂದು ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಹೇಳಿದರು.

### 147 ಕೋಟಿ ರೂ ವೆಚ್ಚದಲ್ಲಿ 1.42 ಲಕ್ಷ ದಿವ್ಯಾಂಗರಿಗೆ ಕೌಶಲ್ಯ ತರಬೇತಿ ನೀಡಿದೆ ಕೇಂದ್ರ ಸರ್ಕಾರ

ಕೌಶಲ್ಯ ಅಭಿವೃದ್ಧಿ ಮತ್ತು ಇತರ ಕಲ್ಯಾಣ ಕಾರ್ಯಕ್ರಮಗಳ ಮೂಲಕ ದಿವ್ಯಾಂಗ ವ್ಯಕ್ತಿಗಳನ್ನು ಸಬಲೀಕರಣಗೊಳಿಸುವಲ್ಲಿ ಕೇಂದ್ರ ಸರ್ಕಾರವು ಗಮನಾರ್ಹ ಪ್ರಗತಿಯನ್ನು ಸಾಧಿಸಿದೆ. 2015ರ ಮಾರ್ಚ್‌ನಲ್ಲಿ ಆರಂಭಿಸಲಾದ ದಿವ್ಯಾಂಗ ವ್ಯಕ್ತಿಗಳ ಕೌಶಲ್ಯಾಭಿವೃದ್ಧಿ ರಾಷ್ಟ್ರೀಯ ಕ್ರಿಯಾ ಯೋಜನೆಯಡಿ (ಎನ್‌ಎಪಿ-ಎಸ್‌ಡಿಪಿ) ವಿಕಲಚೇತನರ ಸಬಲೀಕರಣ ಇಲಾಖೆಯು ರೂ 147.78 ಕೋಟಿ ವೆಚ್ಚದಲ್ಲಿ 1.42 ಲಕ್ಷ ದಿವ್ಯಾಂಗರಿಗೆ ತರಬೇತಿ ನೀಡಿದೆ. ಇದರಲ್ಲಿ 28,000 ವ್ಯಕ್ತಿಗಳು ಉದ್ಯೋಗವನ್ನು ಪಡೆದುಕೊಂಡಿದ್ದಾರೆ ಅಥವಾ ಸ್ವಯಂ ಉದ್ಯೋಗಕ್ಕೆ ಮುಂದಾಗಿದ್ದಾರೆ. ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳ ಮೂಲಕ ಜಾರಿಗೊಳಿಸಲಾದ ಈ ಯೋಜನೆಯು ಆರ್ಥಿಕ ಸ್ವಾತಂತ್ರ್ಯವನ್ನು ಸಕ್ರಿಯಗೊಳಿಸಲು ವೃತ್ತಿಪರ ಕೌಶಲ್ಯಗಳೊಂದಿಗೆ ದಿವ್ಯಾಂಗರನ್ನು ಸಜ್ಜುಗೊಳಿಸುವ ಗುರಿಯನ್ನು ಹೊಂದಿದೆ. ಏಪ್ರಿಲ್ 19, 2017 ರಂದು ಜಾರಿಗೆ ಬಂದಿರುವ ಅಂಗವಿಕಲರ ಹಕ್ಕುಗಳ (RPwD) ಕಾಯಿದೆ 2016, ದಿವ್ಯಾಂಗರ ಹಕ್ಕುಗಳಿಗೆ ಮೂಲಾಧಾರವಾಗಿದೆ. ಕಾಯಿದೆಯು ಮಾನ್ಯತೆ ಪಡೆದ ಅಂಗವಿಕಲರ ಪಟ್ಟಿಯನ್ನು 7 ರಿಂದ 21ಕ್ಕೆ ವಿಸ್ತರಿಸಿದೆ ಮತ್ತು ಮಾನದಂಡದಂತೆ ಅಂಗವೈಕಲ್ಯ ಹೊಂದಿರುವ ವ್ಯಕ್ತಿಗಳಿಗೆ ಸರ್ಕಾರಿ ಉದ್ಯೋಗಗಳಲ್ಲಿ 4% ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ 5% ಮೀಸಲಾತಿಯನ್ನು ಕಡ್ಡಾಯಗೊಳಿಸಲಾಗಿದೆ.

### ಆರ್‌ಬಿಐನ 26ನೇ ಗವರ್ನರ್ ಆಗಿ ಸಂಜಯ್ ಮಲ್ಹೋತ್ರಾ ಅಧಿಕಾರ ಸ್ವೀಕಾರ



ಭಾರತೀಯ ರಿಸರ್ವ್ ಬ್ಯಾಂಕ್ (RBI)ನ 26ನೇ ಗವರ್ನರ್ ಆಗಿ 56 ವರ್ಷದ ಸಂಜಯ್ ಮಲ್ಹೋತ್ರಾ ಅವರು ಮೂರು ವರ್ಷಗಳ ಅವಧಿಗೆ ಅಧಿಕೃತವಾಗಿ ಅಧಿಕಾರ ವಹಿಸಿಕೊಂಡರು. ಮಲ್ಹೋತ್ರಾ ಅವರು ಕಾನ್ಪುರದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಿಂದ ಕಂಪ್ಯೂಟರ್ ಸೈನ್ಸ್ ಪದವಿ ಪಡೆದಿದ್ದಾರೆ. ಇದರೊಂದಿಗೆ ಅಮೆರಿಕದ ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದಿಂದ ಸಾರ್ವಜನಿಕ ನೀತಿಯಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಅವರು 1990ರ ಬ್ಯಾಚ್‌ನ ರಾಜಸ್ಥಾನ ಕೇಡರ್‌ನ ಐಎಎಸ್ ಅಧಿಕಾರಿಯಾಗಿದ್ದಾರೆ. ಅವರು ಈ ಹಿಂದೆ ಸರ್ಕಾರಿ ಸ್ವಾಮ್ಯದ ಆರ್‌ಇಸಿಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿಯೂ ಜವಾಬ್ದಾರಿ ನಿರ್ವಹಿಸಿದ್ದರು. ಕಂದಾಯ ಕಾರ್ಯದರ್ಶಿ ಮತ್ತು ಮೂರು ದಶಕಗಳ ನಾಗರಿಕ ಸೇವಾ ಅನುಭವ ಹೊಂದಿರುವ ಮಲ್ಹೋತ್ರಾ ಅವರು, ದುವ್ವೂರಿ ಸುಬ್ಬರಾವ್ ಅವರ ನಂತರ ನೇರವಾಗಿ ಹಣಕಾಸು ಸಚಿವಾಲಯದಿಂದ ವರ್ಗಾವಣೆಗೊಂಡ ಮೊದಲ ಆರ್‌ಬಿಐ ಗವರ್ನರ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

## ವಿಶ್ವದ ಅತ್ಯಂತ ಕಿರಿಯ ಚೆಸ್ ವಿಶ್ವ ಚಾಂಪಿಯನ್ ಆದ ಗುಕೇಶ್

ಪ್ರೇರಣಾ

ಸಿಂಗಾಪುರದಲ್ಲಿ ನಡೆದ ವಿಶ್ವ ಚೆಸ್ ಚಾಂಪಿಯನ್ ಶಿಪ್‌ನಲ್ಲಿ ಭಾರತದ ಡಿ. ಗುಕೇಶ್ ಇತಿಹಾಸ ನಿರ್ಮಿಸಿದ್ದಾರೆ. ಇವರು ಟೂರ್ನಿಯಲ್ಲಿ ಭರ್ಜರಿ ಪ್ರದರ್ಶನವನ್ನು ನೀಡಿ ಚಾಂಪಿಯನ್ ಪಟ್ಟವನ್ನು ಅಲಂಕರಿಸಿದರು. ಈ ಮೂಲಕ ಈ ಪಟ್ಟವನ್ನು ಅಲಂಕರಿಸಿದ ಕಿರಿಯ ಆಟಗಾರ ಎಂಬ ಖ್ಯಾತಿಯನ್ನು ತಮ್ಮದಾಗಿಸಿಕೊಂಡರು. ಟೂರ್ನಿಯ ಆರಂಭಿಕ ಪಂದ್ಯಗಳಲ್ಲಿ ಕೊಂಚ ನಿಧಾನವಾಗಿ ಆಡಿದ ಗುಕೇಶ್, ಹಂತ ಹಂತವಾಗಿ ಟೂರ್ನಿಯಲ್ಲಿ ಹಿಡಿತ ಸಾಧಿಸುತ್ತಾ ಸಾಗಿ, ಮಹತ್ವದ ಪಂದ್ಯಗಳಲ್ಲಿ ಕೆಚ್ಚೆದೆಯ ಆಟ ಪ್ರದರ್ಶಿಸಿದರು.

2006ರ ಮೇ 29ರಂದು ಚೆನ್ನೈನಲ್ಲಿ ಜನಿಸಿದ ಗುಕೇಶ್, ಮೂಲತಃ ತೆಲುಗು ಕುಟುಂಬದವರು. ಆದರೆ, ಗುಕೇಶ್ ಹುಟ್ಟಿ ಬೆಳೆದಿದ್ದು ಎಲ್ಲವೂ ಭಾರತದ ಬ್ಯಾಂಕಿಗ್ ಕ್ಷೇತ್ರದ ತೊಟ್ಟಿಲು ಎನಿಸಿಕೊಂಡ ಚೆನ್ನೈ ನಗರದಲ್ಲಿ. ಐದು ಬಾರಿಯ ವಿಶ್ವ ಚಾಂಪಿಯನ್ ವಿಶ್ವನಾಥನ್ ಆನಂದ್ ಸೇರಿದಂತೆ ಭಾರತದ ಹಲವಾರು ಪ್ರಮುಖ ಚೆಸ್ ಆಟಗಾರರ ಜನ್ಮಸ್ಥಳ ಚೆನ್ನೈ. ಹೀಗಾಗಿ ಗುಕೇಶ್‌ಗೆ ಹೆಚ್ಚುವರಿ ಸ್ಪೂರ್ತಿ ಬೇಕಿರಲಿಲ್ಲ. ಆತನಿಗೆ ಆತನ ಊರೇ, ಅಲ್ಲಿ ಹುಟ್ಟಿದ ಚೆಸ್ ದಿಗ್ಗಜರೇ ಸ್ಪೂರ್ತಿ, ಮಾದರಿ. ಗುಕೇಶ್ ತಂದೆ ರಜನಿಕಾಂತ್, ಕಿವಿ-ಮೂಗು ಮತ್ತು ಗಂಟಲು ಶಸ್ತ್ರಚಿಕಿತ್ಸಕ. ತಾಯಿ ಪದ್ಮಾ ಸೂಕ್ಷ್ಮ ಜೀವಶಾಸ್ತ್ರಜ್ಞರಾಗಿದ್ದಾರೆ.

ಗುಕೇಶ್ 2015ರಲ್ಲಿ ತಮ್ಮ FIDE ಮಾಸ್ಟರ್ ಟೈಟಲ್ ತಮ್ಮದಾಗಿಸಿಕೊಂಡರು. ಅದಕ್ಕೂ ಮುನ್ನವೇ ಏಷ್ಯನ್ ಸ್ಕೂಲ್ ಚೆಸ್ ಚಾಂಪಿಯನ್‌ಶಿಪ್‌ನ 9 ವರ್ಷದೊಳಗಿನ ವಿಭಾಗವನ್ನು ಈ ಬಾಲಕ ಗೆದ್ದಾಗಿತ್ತು. 2018ರ ಮಾರ್ಚ್ ತಿಂಗಳಲ್ಲಿ, ಅಂದರೆ ಕೇವಲ 11 ವರ್ಷದವನಿದ್ದಾಗಲೇ ಅವರು ಅಂತಾರಾಷ್ಟ್ರೀಯ ಚೆಸ್ ಮಾಸ್ಟರ್ ಆದರು. 2019ರ ಜನವರಿ 15ರಂದು ದೆಹಲಿಯಲ್ಲಿ ನಡೆದ ಅಂತಾರಾಷ್ಟ್ರೀಯ ಗ್ರ್ಯಾಂಡ್‌ಮಾಸ್ಟರ್ ಓಪನ್‌ನಲ್ಲಿ ಗ್ರ್ಯಾಂಡ್‌ಮಾಸ್ಟರ್ ಪ್ರಶಸ್ತಿಯನ್ನು ಬಾಚಿಕೊಂಡರು. ಆ ದಿನ ಗುಕೇಶ್ ಪಾಲಿಗೆ ಐತಿಹಾಸಿಕ. ಏಕೆಂದರೆ ಚೆಸ್ ಗ್ರ್ಯಾಂಡ್‌ಮಾಸ್ಟರ್ ಖ್ಯಾತಿ ಪಡೆಯುವಾಗ ಅವರ ವಯಸ್ಸು ಇನ್ನೂ 12 ವರ್ಷ, 7 ತಿಂಗಳು ಮತ್ತು 17 ದಿನಗಳು ಮಾತ್ರ. ಅಂದರೆ ಈ ಹಿರಿಮೆಗೆ ಭಾಜನರಾದ ಮೂರನೇ ಅತ್ಯಂತ ಕಿರಿಯ ವ್ಯಕ್ತಿ ಎಂಬ ಹೆಗ್ಗಳಿಕೆ ಇವರದ್ದು.



> ಭಾರತಕ್ಕೆ ವಿಶ್ವ ಚಾಂಪಿಯನ್ ಪ್ರಶಸ್ತಿಯನ್ನು ಮರಳಿ ತರುವವನು ನಾನಾಗಬೇಕೆನ್ನುವುದು ಇದುವರೆಗಿನ ನನ್ನ ಜೀವನದ ಏಕೈಕ ಪ್ರಮುಖ ಕನಸಾಗಿತ್ತು. ಅದು ಈಗ ನನಸಾಗಿದೆ. ನನ್ನ ದೇಶಕ್ಕಾಗಿ, ನನ್ನ ಪ್ರೀತಿಪಾತ್ರರಿಗಾಗಿ ಇದನ್ನು ಮಾಡುವುದಕ್ಕಿಂತ ಉತ್ತಮವಾದದ್ದೇನೂ ಇಲ್ಲ. ನನ್ನ ತಾಯಿ ಪ್ರತಿದಿನ ಮಲಗುವ ಮುನ್ನ ನನಗೆ ರಾಮಾಯಣ ಮತ್ತು ಮಹಾಭಾರತದ ಕಥೆಗಳನ್ನು ಹೇಳುತ್ತಿದ್ದರು. ಇದು ನನ್ನನ್ನು ಧೈರ್ಯಶಾಲಿಯಾಗುವಂತೆ ಮಾಡಿತು ಮತ್ತು ಹೆಚ್ಚು ದೃಢವಿಶ್ವಾಸವನ್ನು ಹೊಂದುವಂತೆ ಮಾಡಿತು.
>
> – ಡಿ ಗುಕೇಶ್
> ಕಿರಿಯ ವಿಶ್ವ ಚೆಸ್ ಚಾಂಪಿಯನ್

ಗುಕೇಶ್ ಅವರ ಭಿನ್ನ ಕಾರ್ಯತಂತ್ರ ಮತ್ತು ಅನನ್ಯ ತಿಳುವಳಿಕೆಯ ವಿಧಾನವನ್ನು ಗುರುತಿಸಿದವರು ಅವರ ಆಗಿನ ತರಬೇತುದಾರ ಹಾಗೂ ಭಾರತೀಯ ಗ್ರ್ಯಾಂಡ್‌ಮಾಸ್ಟರ್ ವಿಷ್ಣು ಪ್ರಸನ್ನ. ಅವರ ಪ್ರತಿಭೆಗೆ ತಕ್ಕಂತೆ ಆಟದ ಇನ್ನಷ್ಟು ಕೌಶಲ್ಯಗಳನ್ನು ಹೇಳಿಕೊಟ್ಟರು. ಮುಂದಿನ 16 ತಿಂಗಳ ಅವಧಿಯಲ್ಲಿ, ಗುಕೇಶ್ ಅವರು ತಮ್ಮ GM ಮಾನದಂಡಗಳನ್ನು ಪೂರೈಸಲು 13 ದೇಶಗಳಿಗೆ ಪ್ರಯಾಣಿಸಿದರು. 30 ಪಂದ್ಯಾವಳಿಗಳಲ್ಲಿ 276 ಆಟಗಳಲ್ಲಿ ಮಿಂಚಿದರು.

ವಿಶ್ವ ಚೆಸ್ ಚಾಂಪಿಯನ್‌ಶಿಪ್ ಫೈನಲ್ ತಲುಪಿದ ಎರಡನೇ ಭಾರತೀಯ ಎಂಬ ಹೆಗ್ಗಳಿಕೆಗೆ ಗುಕೇಶ್ ಪಾತ್ರರಾದರು. ಅವರು ತಮ್ಮ ರೋಲ್ ಮಾಡೆಲ್ ವಿಶ್ವನಾಥನ್ ಆನಂದ್ ಅವರ ಹೆಜ್ಜೆಗಳನ್ನು ಅನುಸರಿಸಿದ್ದಾರೆ. ಅಷ್ಟೇ ಅಲ್ಲ ಐತಿಹಾಸಿಕ ಗೆಲುವಿನೊಂದಿಗೆ ಈ ಸಾಧನೆ ಮಾಡಿದ ವಿಶ್ವದ ಅತ್ಯಂತ ಕಿರಿಯ ಹಾಗೂ ಭಾರತದ ಎರಡನೇ ಆಟಗಾರ ಎನಿಸಿಕೊಂಡರು.

ಚೆಸ್‌ನ ಅತ್ಯಂತ ಪ್ರತಿಷ್ಠಿತ ಪ್ರಶಸ್ತಿ ವಿಶ್ವ ಚೆಸ್ ಚಾಂಪಿಯನ್‌ಶಿಪ್ ಫೈನಲ್‌ನಲ್ಲಿ ಸ್ಪರ್ಧಿಸಿದ ಮೊದಲ ಹದಿಹರೆಯದ ಆಟಗಾರ ಎಂಬ ದಾಖಲೆಯೂ ಇವರದ್ದು. ಅಂತಾರಾಷ್ಟ್ರೀಯ ಚೆಸ್ ಬದುಕಿನ ಆರಂಭದಲ್ಲಿ ಸತತ ವಿದೇಶ ಪ್ರಯಾಣಗಳಿಗೆ ಹಣಕಾಸಿನ ಸಮಸ್ಯೆ ಎದುರಿಸುತ್ತಿದ್ದ ಗುಕೇಶ್ ಕುಟುಂಬಕ್ಕೆ, ಕುಟುಂಬ ಹಾಗೂ ಸ್ನೇಹಿತರೇ ನೆರವಾಗಿದ್ದರು. ಆದರೆ, ಈಗ ಹಣಕಾಸಿನ ಚಿಂತೆಯಿಲ್ಲ. ಅಂತಾರಾಷ್ಟ್ರೀಯ ಚೆಸ್ ಸಾಧಕನಿಗೆ ಪ್ರಾಯೋಜಕತ್ವ ನೀಡಲು, ಹಲವು ಪ್ರಾಯೋಜಕರು ಮುಂದೆ ಬರುತ್ತಿದ್ದಾರೆ. ಕಂಡ ಕನಸನ್ನು ನನಸಾಗಿಸುವ ಬಹು ದೊಡ್ಡ ಮಾದರಿಯಾಗಿ ಗುಕೇಶ್ ನಿಂತಿದ್ದಾರೆ.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th DECEMBER 2024

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26

FORTNIGHTLY 01-01-2025



## 2035ರ ವೇಳೆಗೆ ಸ್ವಂತ ಬಾಹ್ಯಾಕಾಶ ನಿಲ್ದಾಣ ಹೊಂದಲಿದೆ ಭಾರತ

2035ರ ವೇಳೆಗೆ ಭಾರತವು ತನ್ನದೇ ಆದ ಬಾಹ್ಯಾಕಾಶ ನಿಲ್ದಾಣ 'ಭಾರತ್ ಅಂತರಿಕ್ಷಾ ನಿಲ್ದಾಣ'ವನ್ನು ಹೊಂದಲಿದೆ ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವ ಡಾ. ಜಿತೇಂದ್ರ ಸಿಂಗ್ ಹೇಳಿದ್ದಾರೆ. ಅಲ್ಲದೇ 2040ರ ವೇಳೆಗೆ ಭಾರತೀಯರು ಚಂದ್ರನ ಮೇಲೆ ಇಳಿಯಲಿದ್ದಾರೆ ಎಂದು ತಿಳಿಸಿದ್ದಾರೆ. ವಿಜ್ಞಾನ ಸಚಿವಾಲಯದ ಸಾಧನೆಗಳ ಕುರಿತು ನವದೆಹಲಿಯಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಜಿತೇಂದ್ರ ಸಿಂಗ್ ಅವರು ಸರ್ಕಾರ ತಂದಿರುವ ಬಾಹ್ಯಾಕಾಶ ಸುಧಾರಣೆಗಳು ಬಾಹ್ಯಾಕಾಶ ಕ್ಷೇತ್ರವನ್ನು ಪ್ರಗತಿಯತ್ತ ಕೊಂಡೊಯ್ದಿದೆ. ಇದುವರೆಗೆ ಭಾರತದಿಂದ 432 ವಿದೇಶಿ ಉಪಗ್ರಹಗಳನ್ನು ಉಡಾವಣೆ ಮಾಡಲಾಗಿದೆ. ವಿಜ್ಞಾನಕ್ಕೆ ಬಹು-ಶಿಸ್ತಿನ ವಿಧಾನಕ್ಕಾಗಿ ಸರ್ಕಾರದ ದೃಷ್ಟಿಕೋನವನ್ನು ಸಚಿವರು ಪ್ರಸ್ತಾಪಿಸಿದರು. ಭಾರತವು ಜೈವಿಕ ತಂತ್ರಜ್ಞಾನ, ಜೈವಿಕ-ಆರ್ಥಿಕತೆ, ಭೌಗೋಳಿಕ-ಪ್ರಾದೇಶಿಕ ಕಾರ್ಯಕ್ರಮಗಳು, ರಕ್ಷಣೆ ಮತ್ತು ಕೃಷಿಯಲ್ಲಿ ವಿಜ್ಞಾನವನ್ನು ವಿವಿಧ ಸಾಮರ್ಥ್ಯಗಳಲ್ಲಿ ಅಳವಡಿಸಿಕೊಳ್ಳುವ ಮೂಲಕ ದಾಪುಗಾಲು ಹಾಕಿದೆ ಎಂದರು.

## ಭಾರತದ ವಿರುದ್ಧ ನಮ್ಮ ನೆಲ ಬಳಕೆಯಾಗಲು ಬಿಡುವುದಿಲ್ಲ: ಶ್ರೀಲಂಕಾ ಅಧ್ಯಕ್ಷ



ಭಾರತ ಮತ್ತು ಶ್ರೀಲಂಕಾ ಎರಡು ದೇಶಗಳ ನಡುವೆ ದುಪ್ಪಟ್ಟು ತೆರಿಗೆಯನ್ನು ತಪ್ಪಿಸಲು ಮತ್ತು ಆದಾಯದಲ್ಲಿನ ತೆರಿಗೆಗಳಿಗೆ ಸಂಬಂಧಿಸಿದಂತೆ ಹಣಕಾಸಿನ ವಂಚನೆಯನ್ನು ತಡೆಗಟ್ಟಲು ಪ್ರೋಟೋಕಾಲ್ ತಿದ್ದುಪಡಿ ಒಪ್ಪಂದಗಳನ್ನು ಎರಡು ದೇಶಗಳು ಇತ್ತೀಚೆಗೆ ವಿನಿಮಯ ಮಾಡಿಕೊಂಡವು. ನವದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಶ್ರೀಲಂಕಾ ಅಧ್ಯಕ್ಷ ಅನುರಾ ಕುಮಾರ ಡಿಸ್ಸಾನಾಯಕೆ ನಡುವಿನ ದ್ವಿಪಕ್ಷೀಯ ಮಾತುಕತೆಯ ನಂತರ ಒಪ್ಪಂದಗಳನ್ನು ವಿನಿಮಯ ಮಾಡಿಕೊಳ್ಳಲಾಯಿತು. ಶ್ರೀಲಂಕಾದ ಮಹೋ-ಅನುರಾಧಪುರ ವಿಭಾಗದಲ್ಲಿ ಸಿಗ್ನಲಿಂಗ್ ಯೋಜನೆಗೆ 14.9 ಮಿಲಿಯನ್ ಡಾಲರ್ ಅನುದಾನವನ್ನು ಈ ಸಂದರ್ಭದಲ್ಲಿ ಘೋಷಿಸಲಾಯಿತು. ಜಾಫ್ನಾ ವಿಶ್ವವಿದ್ಯಾನಿಲಯ ಮತ್ತು ಪೂರ್ವ ವಿಶ್ವವಿದ್ಯಾನಿಲಯದಿಂದ ಫಲಾನುಭವಿಗಳ ಶೈಕ್ಷಣಿಕ ಕೋರ್ಸ್‌ಗಳ ಅಂತ್ಯದವರೆಗೆ ವಾರ್ಷಿಕವಾಗಿ 100 ಹೊಸ ವಿದ್ಯಾರ್ಥಿಗಳಿಗೆ ಹಣಕಾಸಿನ ನೆರವು ಯೋಜನೆಯನ್ನು ಸಹ ಘೋಷಿಸಲಾಯಿತು. ಇದೇ ಸಂದರ್ಭದಲ್ಲಿ ಭಾರತದ ಹಿತಾಸಕ್ತಿಗೆ ಹಾನಿಯಾಗುವ ರೀತಿಯಲ್ಲಿ ಶ್ರೀಲಂಕಾವನ್ನು ಯಾವುದೇ ರೀತಿಯಲ್ಲಿ ಬಳಸಿಕೊಳ್ಳಲು ಬಿಡುವುದಿಲ್ಲ ಎಂದು ಡಿಸ್ಸಾನಾಯಕೆ ಅವರು ಭಾರತದ ಪ್ರಧಾನಿಗೆ ಭರವಸೆ ನೀಡಿದ್ದಾರೆ. ಭಾರತದೊಂದಿಗೆ ಸಹಕಾರ ಖಂಡಿತವಾಗಿಯೂ ಅಭಿವೃದ್ಧಿ ಹೊಂದಲಿದೆ. ಈ ಭೇಟಿಯು ಉಭಯ ದೇಶಗಳ ನಡುವಿನ ಸಹಕಾರವನ್ನು ಮತ್ತಷ್ಟು ಅಭಿವೃದ್ಧಿಪಡಿಸಲು ದಾರಿ ಮಾಡಿಕೊಟ್ಟಿದೆ ಎಂದರು.

## 'ಒಂದು ರಾಷ್ಟ್ರ ಒಂದು ಚುನಾವಣೆ'ಯಿಂದ ಭಾರತದ ಜಿಡಿಪಿ 1 ರಿಂದ 1.5 % ಹೆಚ್ಚಳ: ಕೋವಿಂದ್

ಒಂದು ರಾಷ್ಟ್ರ, ಒಂದು ಚುನಾವಣೆ (ONOE) ಭಾರತದ ಜಿಡಿಪಿಯನ್ನು 1 ರಿಂದ 1.5 ಪ್ರತಿಶತದಷ್ಟು ಹೆಚ್ಚಿಸುವ ಸಾಮರ್ಥ್ಯವನ್ನು ಹೊಂದಿದೆ ಎಂದು ಮಾಜಿ ರಾಷ್ಟ್ರಪತಿ ರಾಮ್‌ನಾಥ್ ಕೋವಿಂದ್



ಹೇಳಿದ್ದಾರೆ. 'ಒಂದು ರಾಷ್ಟ್ರ, ಒಂದು ಚುನಾವಣೆ'ಯನ್ನು ಬಲವಾಗಿ ಸಮರ್ಥಿಸಿಕೊಂಡಿರುವ ONOE ಸಮಿತಿಯ ಅಧ್ಯಕ್ಷರೂ ಆಗಿರುವ ರಾಮನಾಥ್ ಕೋವಿಂದ್ ಅವರು ಇದು ದೇಶದ ರಾಜಕೀಯ ಚಿತ್ರಣದಲ್ಲಿ ಮಹತ್ವದ ಬದಲಾವಣೆ ತರಲಿದೆ. 2024ರ ಸೆಪ್ಟೆಂಬರ್‌ನಲ್ಲಿ, ಕೇಂದ್ರ ಸಚಿವ ಸಂಪುಟವು 'ಒಂದು ರಾಷ್ಟ್ರ, ಒಂದು ಚುನಾವಣೆ' ಉಪಕ್ರಮವನ್ನು ಅನುಮೋದಿಸಿತು. ಲೋಕಸಭೆ, ವಿಧಾನಸಭೆ, ನಗರ ಸಂಸ್ಥೆಗಳು ಮತ್ತು ಪಂಚಾಯತ್‌ಗಳಿಗೆ ಏಕಕಾಲೀನ ಚುನಾವಣೆಗಳನ್ನು ಪ್ರಸ್ತಾಪಿಸಿ, ಎಲ್ಲವನ್ನೂ 100 ದಿನಗಳ ಕಾಲಮಿತಿಯೊಳಗೆ ನಡೆಸುವ ಪ್ರಸ್ತಾಪವನ್ನು ಇದು ಹೊಂದಿದೆ. ಕೋವಿಂದ್ ಅಧ್ಯಕ್ಷತೆಯ ಉನ್ನತ ಮಟ್ಟದ ಸಮಿತಿಯು ಈ ಸಲಹೆಗಳನ್ನು ತಮ್ಮ ಸಮಗ್ರ ವರದಿಯಲ್ಲಿ ಮಂಡಿಸಿದೆ.

## ಮಸೀದಿ ಆವರಣದಲ್ಲಿ 'ಜೈ ಶ್ರೀ ರಾಮ್' ಘೋಷಣೆ ಕೂಗುವುದು ಹೇಗೆ ಅಪರಾಧ?: ಸುಪ್ರೀಂ ಪ್ರಶ್ನೆ

ಮಸೀದಿ ಆವರಣದಲ್ಲಿ ಜೈ ಶ್ರೀರಾಮ್ ಎಂದು ಕೂಗಿದ ಆರೋಪದ ಮೇಲೆ ಇಬ್ಬರ ವಿರುದ್ಧದ ವಿಚಾರಣೆಯನ್ನು ರದ್ದುಗೊಳಿಸಿದ ಕರ್ನಾಟಕ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಲಾದ ಅರ್ಜಿಯ ವಿಚಾರಣೆ ವೇಳೆ ನ್ಯಾಯಮೂರ್ತಿಗಳಾದ ಪಂಕಜ್ ಮಿಥಾಲ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠ, ಮಸೀದಿ ಬಳಿ ಜೈ ಶ್ರೀರಾಮ್ ಘೋಷಣೆ ಕೂಗುವುದು ಹೇಗೆ ಅಪರಾಧ? ಈ ಬಗ್ಗೆ ನಿಮ್ಮ ನಿಲುವು ತಿಳಿಸಿ ಎಂದು ಕರ್ನಾಟಕ ಪೊಲೀಸರಿಗೆ ಸೂಚಿಸಿದೆ. ಮಸೀದಿ ಆವರಣದಲ್ಲಿ ಜೈ ಶ್ರೀರಾಮ್ ಘೋಷಣೆ ಕೂಗಿದರೆ ಧಾರ್ಮಿಕ ಭಾವನೆಗೆ ಧಕ್ಕೆಯಾಗುವುದಿಲ್ಲ ಎಂಬ ಕರ್ನಾಟಕ ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಹೈದರ್ ಅಲಿ ಸಿ. ಎಂ. ಅವರು ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ ಈ ಪ್ರಶ್ನೆಯನ್ನು ಎತ್ತಿದೆ. ಹಾಗೆಯೇ ಆರೋಪಿಗಳ ಗುರುತು ಖಾತ್ರಿಪಡಿಸಿಕೊಳ್ಳುವ ಮುನ್ನ ಸಿಸಿಟಿವಿ ಇಲ್ಲವೇ ಇನ್ನಾವುದೆ ಪುರಾವೆಗಳನ್ನು ಪರಿಶೀಲಿಸಲಾಗಿದೆಯೇ ಎಂದು ನ್ಯಾಯಮೂರ್ತಿಗಳಾದ ಪಂಕಜ್ ಮಿತ್ತಲ್ ಮತ್ತು ಸಂದೀಪ್ ಮೆಹ್ತಾ ಅವರಿದ್ದ ಪೀಠ ಪ್ರಶ್ನಿಸಿತು. ಅಂತಿಮವಾಗಿ ದೂರುದಾರರು ಸಲ್ಲಿಸಿದ ಮೇಲ್ಮನವಿಯ ಪ್ರತಿಯನ್ನು ರಾಜ್ಯ ಸರ್ಕಾರಕ್ಕೆ ನೀಡುವಂತೆ ನಿರ್ದೇಶಿಸಿದ ಸುಪ್ರೀಂ ಕೋರ್ಟ್ ಪ್ರಕರಣದ ಮುಂದಿನ ವಿಚಾರಣೆಯನ್ನು 2025ರ ಜನವರಿ ತಿಂಗಳಿನಲ್ಲಿ ನಡೆಸುವುದಾಗಿ ತಿಳಿಸಿದೆ.

## ದೇಶದೊಳಗಿನ ಮತ್ತು ಹೊರಗಿನ ದೇಶ ವಿರೋಧಿ ಶಕ್ತಿಗಳ ಬಗ್ಗೆ ಎಚ್ಚರಿಕೆ ಇರಲಿ: ಉಪರಾಷ್ಟ್ರಪತಿ ಜಗದೀಪ್ ಧನ್‌ಖರ್



ಭಾರತದ ಪ್ರಗತಿಯನ್ನು ಅರಗಿಸಿಕೊಳ್ಳಲು ಸಾಧ್ಯವಾಗದ ಮತ್ತು ದೇಶವನ್ನು ವಿಭಜಿಸಲು ನೋಡುತ್ತಿರುವ ಒಳಗಿನ ಮತ್ತು ಹೊರಗಿನ ಕೆಲವು ಶಕ್ತಿಗಳ ವಿರುದ್ಧ ಉಪರಾಷ್ಟ್ರಪತಿ ಜಗದೀಪ್ ಧನ್‌ಖರ್ ಎಚ್ಚರಿಕೆ ನೀಡಿದ್ದಾರೆ. ಪ್ರತಿಯೊಂದು ದೇಶ-ವಿರೋಧಿ ನಿರೂಪಣೆಯನ್ನು ತಟಸ್ಥಗೊಳಿಸಲು ಜನರು ಒಟ್ಟಾಗಿರಬೇಕೆಂದು ಅವರು ಕರೆ ನೀಡಿದ್ದಾರೆ. ರಾಜಸ್ಥಾನದ ಜೈಪುರದಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಧನ್‌ಖರ್ ಅವರು, "ದೇಶದ ಒಳಗಿನ ಮತ್ತು ಹೊರಗಿನ ಕೆಲವು ಶಕ್ತಿಗಳಿಗೆ ಭಾರತದ ಪ್ರಗತಿಯನ್ನು ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ದೇಶವನ್ನು ಒಡೆಯಲು, ದೇಶವನ್ನು ವಿಭಜಿಸಲು ಯೋಜಿತ ಪ್ರಯತ್ನ ನಡೆಯುತ್ತಿದೆ ಮತ್ತು ಭಾರತದ ಸಂಸ್ಥೆಗಳನ್ನು ಅವಮಾನಿಸಲಾಗುತ್ತಿದೆ. ಒಂದು ವಿಷಯ ತುಂಬಾ ಸ್ಪಷ್ಟವಾಗಿದೆ, ಭಾರತವು ಸಾಮರ್ಥ್ಯವಿರುವ ರಾಷ್ಟ್ರ. ಭಾರತವು ಬೆಳೆಯುತ್ತಿದೆ ಮತ್ತು ನಮ್ಮ ಏಳಿಗೆಯನ್ನು ತಡೆಯಲಾಗದು" ಎಂದಿದ್ದಾರೆ.

## 5000 ಮಂದಿಯಿಂದ ಗೀತಾ ಪಠಣ: ಗಿನ್ನೆಸ್ ದಾಖಲೆ ಮಾಡಿದ ಮಧ್ಯಪ್ರದೇಶ

ಮಧ್ಯಪ್ರದೇಶದ ರಾಜಧಾನಿ ಭೋಪಾಲ್‌ನಲ್ಲಿ 5000 ಕ್ಕೂ ಹೆಚ್ಚು ಭಗವತ್ ಭಕ್ತರು ಭಗವದ್ಗೀತೆ ಪಠಿಸಿ ಗಿನ್ನೆಸ್ ವಿಶ್ವದಾಖಲೆ ನಿರ್ಮಾಣ ಮಾಡಿದ್ದಾರೆ. ಗೀತಾ ಜಯಂತಿಯ ಪ್ರಯುಕ್ತ ಆಚರಿಸಲಾದ 'ಗೀತಾ ಪಥ'ದ ಸಂದರ್ಭದಲ್ಲಿ ಈ ವಿಶ್ವ ದಾಖಲೆಯನ್ನು ರಚಿಸಲಾಗಿದೆ. ಭೋಪಾಲ್‌ನ ಲಾಲ್ ಪರೇಡ್ ಗ್ರೌಂಡ್‌ನ ಯೂನಿಸನ್‌ನಲ್ಲಿ ನಡೆದ ಗೀತಾ ಪಠಣದಲ್ಲಿ ಸುಮಾರು 5000 ಆಚಾರ್ಯರು ಭಗವದ್ಗೀತೆಯ ಮೂರನೇ ಅಧ್ಯಾಯ 'ಕರ್ಮಯೋಗ'ವನ್ನು ಪಠಣ



ಮಾಡಿದ್ದಾರೆ. ಮುಖ್ಯಮಂತ್ರಿ ಮೋಹನ್ ಯಾದವ್ ಅವರು ಗಿನ್ನೆಸ್ ವಿಶ್ವದಾಖಲೆಯ ಪ್ರಮಾಣ ಪತ್ರವನ್ನು ಸ್ವೀಕರಿಸಿದರು. ಭಗವದ್ಗೀತೆಯು ರಾಜ್ಯದ ಶೈಕ್ಷಣಿಕ ಪಠ್ಯಕ್ರಮದ ಭಾಗವಾಗಲಿದೆ ಎಂದು ಹರಿಯಾಣದ ಕುರುಕ್ಷೇತ್ರದಲ್ಲಿ ಅಂತಾರಾಷ್ಟ್ರೀಯ ಗೀತಾ ಮಹೋತ್ಸವದ ಅಡಿಯಲ್ಲಿ ನಡೆದ ಸಂತ ಮಹೋತ್ಸವವನ್ನು ಉದ್ದೇಶಿಸಿ ಮಾತನಾಡಿದ ಸಂದರ್ಭದಲ್ಲಿ ಮುಖ್ಯಮಂತ್ರಿ ಘೋಷಿಸಿದ್ದಾರೆ. ಅಲ್ಲದೇ ಇನ್ನು ಮೂರು ವರ್ಷಗಳಲ್ಲಿ ರಾಜ್ಯದ ಎಲ್ಲ ನಗರಸಭೆಗಳಲ್ಲಿ ಗೀತಾಭವನ ಸಿದ್ಧಗೊಳ್ಳಲಿದೆ ಎಂದು ಮಾಹಿತಿ ನೀಡಿದ್ದರು.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-560 004. ಮೊಬೈಲ್: 97391 83021

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-18.